# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1622**
**ಮಾನ್ಯ ಸದಸ್ಯರ ಹೆಸರು : ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)**
**ಉತ್ತರಿಸುವ ದಿನಾಂಕ : 18-03-2026**
**ಉತ್ತರಿಸುವ ಸಚಿವರು : ಲೋಕೋಪಯೋಗಿ ಸಚಿವರು**

| ಕ್ರಸಂ. | ಪ್ರಶ್ನೆ | ಉತ್ತರ |
|---|---|---|
| ಅ) | KSHIP ವತಿಯಿಂದ ಹೊಸಕೋಟೆ ಮಾಲೂರು ರಾಜ್ಯ ಹೆದ್ದಾರಿ-95 ಮತ್ತು 168ರ ಹೆಚ್‌ಎಎಂ ಕಾಮಗಾರಿ (ಟೆಂಡರ್ ಸಂಖ್ಯೆ:KSHIP/2024-25/WORK-INDENTS) ಅನ್ನು ಯಾವ ದಿನಾಂಕದಂದು ಟೆಂಡರ್ ಕರೆಯಲಾಗಿತ್ತು; ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಯಾವುದು; ಯಾವ ದಿನಾಂಕದಂದು ಟೆಂಡರ್ ತೆರೆಯಲಾಗಿತ್ತು; ಯಾವ ದಿನಾಂಕದಂದು ಟೆಂಡರ್ ಕಾರ್ಯಾದೇಶ ನೀಡಲಾಗಿದೆ; (ಟೆಂಡರ್‌ನಲ್ಲಿ ಭಾಗವಹಿಸಿದ ಕಂಪನಿ, ಅನರ್ಹಗೊಂಡ ಕಂಪನಿಗಳ ಸಂಪೂರ್ಣ ಹೆಸರಿನೊಂದಿಗೆ ವಿವರ ನೀಡುವುದು); | ಯೋಜನಾ ಅನುಷ್ಠಾನ ಘಟಕ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (KSHIP) ವತಿಯಿಂದ ಹೊಸಕೋಟೆ-ಮಾಲೂರು, ಮಾಲೂರಿನಲ್ಲಿ Elevated Corridor ಸೇರಿ ಮಾಲೂರು ಕೈಗಾರಿಕಾ ಪ್ರದೇಶ ಒಳಗೊಂಡ ರಸ್ತೆ ನಿರ್ಮಾಣ ಕಾಮಗಾರಿಯನ್ನು ಹೈಬ್ರಿಡ್ ವರ್ಷಾಸನ ಮಾದರಿಯಲ್ಲಿ (HAM) ಅನುಷ್ಠಾನಗೊಳಿಸಲು (KSHIP/2024-25/RD/ WORK_INDENT5) ದಿನಾಂಕ:01.03.2025 ರಂದು ಟೆಂಡರ್ ಆಹ್ವಾನಿಸಲಾಗಿದ್ದು, ಕೆ.ಪಿ.ಪಿ ವೇದಿಕೆಯಲ್ಲಿ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ:16.04.2025 ಎಂದು ನಿಗದಿಪಡಿಸಲಾಗಿತ್ತು. ಟೆಂಡರ್ ತಾಂತ್ರಿಕ ಬಿಡ್‌ಗಳನ್ನು ದಿನಾಂಕ:22.09.2025 ರಂದು ತೆರೆಯಲಾಗಿದ್ದು, ಟೆಂಡರ್‌ನಲ್ಲಿ ಈ ಕೆಳಕಂಡ ಬಿಡ್‌ದಾರರು ಭಾಗವಹಿಸಿರುತ್ತಾರೆ.<br><br>1. M/s Bharat Vanijya Eastern Pvt. ltd.<br>2. M/s Bhartia Infra project Ltd.<br>3. M/s Dinesh Chandra R Agrawal Infracon Pvt. Ltd.<br>4. M/s KNR Constructions Ltd.<br>5. M/s PSG Construction<br>6. M/s Ramalingam Construction Company Pvt. Ltd.<br><br>ಮೇಲ್ಕಂಡ ಬಿಡ್‌ದಾರರ ಪೈಕಿ, ಕ್ರಮ ಸಂಖ್ಯೆ 3 ರಿಂದ 6 ರಲ್ಲಿನ ಬಿಡ್‌ದಾರರು ಟೆಂಡರ್ ನಿಯಮಾನುಸಾರ ಬಿಡ್ ಮಾನ್ಯತೆಯನ್ನು ವಿಸ್ತರಿಸಿರುವುದಿಲ್ಲವಾದ ಕಾರಣ ಅನರ್ಹಗೊಂಡಿರುತ್ತಾರೆ.<br><br>ಬಿಡ್ ಮಾನ್ಯತೆಯನ್ನು ವಿಸ್ತರಿಸಿ ಪ್ರತಿಕ್ರಿಯಿಸಿದ ಕ್ರಮ ಸಂಖ್ಯೆ 1 ಮತ್ತು 2 ರಲ್ಲಿನ ಬಿಡ್‌ದರರು ತಾಂತ್ರಿಕ ಬಿಡ್‌ನಲ್ಲಿ ಅರ್ಹರಾಗಿದ್ದು, ಸದರಿ ಬಿಡ್‌ದಾರರ ಟೆಂಡರ್ ಆರ್ಥಿಕ ಬಿಡ್‌ಗಳನ್ನು ದಿನಾಂಕ: 06.10.2025 ರಂದು ತೆರೆಯಲಾಗಿರುತ್ತದೆ. ಆರ್ಥಿಕ ಬಿಡ್‌ನಲ್ಲಿ ಕನಿಷ್ಠತಮ ಬಿಡ್ ಸಲ್ಲಿಸಿದ್ದ ಬಿಡ್‌ದಾರರೊಂದಿಗೆ ದಿನಾಂಕ:17.10.2025 ರಂದು ಗುತ್ತಿಗೆ ಕರಾರು ಮಾಡಿಕೊಳ್ಳಲಾಗಿರುತ್ತದೆ. |

| | | |
|---|---|---|
| ಆ) | ಪಶ್ಚಿಮ ಬಂಗಾಳ ಮೂಲದ BVEPL ಸಂಸ್ಥೆಯ ಮೇಲೆ 11/07/2025 ರಂದು ವಂಚನೆಯ ಕುರಿತು ಸಿಬಿಐ ಕೇಸು ದಾಖಲಿಸಿ ಬಳಿಕವೂ ಟೆಂಡರ್ ಪ್ರಕ್ರಿಯೆ ಮುಂದುವರೆಸಲು ಕಾರಣವೇನು; ಸಿಬಿಐ ಕೇಸು ದಾಖಲಿಸಿದ ಕುರಿತಾದ ಮಾಹಿತಿ ಸರ್ಕಾರದ ಗಮನಕ್ಕೆ ಬಂದ ದಿನಾಂಕ ಯಾವುದು; ಯಾವ ರೂಪದಲ್ಲಿ ಗಮನಕ್ಕೆ ಬಂದಿದೆ; (ವಿವರ ನೀಡುವುದು) | ಪಶ್ಚಿಮ ಬಂಗಾಳ ಮೂಲದ BVEPL ಸಂಸ್ಥೆಯ ವಿರುದ್ಧ ಸಿಬಿಐ ಪ್ರಕರಣ ದಾಖಲಾಗಿರುವ ಬಗ್ಗೆ ಟೆಂಡರ್‌ನಲ್ಲಿ ಭಾಗವಹಿಸಿರುವ ಇನ್ನಿತರ ಯಾವುದೇ ಬಿಡ್‌ದಾರರಿಂದ ಮಾಹಿತಿ ಸ್ವೀಕೃತವಾಗಿರುವುದಿಲ್ಲ. ಸದರಿ ಸಂಸ್ಥೆಯ ವಿರುದ್ಧ ಸಿಬಿಐ ಪ್ರಕರಣ ದಾಖಲಾಗಿರುವ ಬಗ್ಗೆ ಟೆಂಡರ್‌ಗೆ ಸಂಬಂಧಪಡದ 3ನೇ ವ್ಯಕ್ತಿಯಿಂದ ದಿನಾಂಕ:24-07-2025 ರ ಪತ್ರದ ಮೂಲಕ ಮಾಹಿತಿ ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಕುರಿತು ಪರಿಶೀಲಿಸಲಾಗಿ, ಸದರಿ ಸಂಸ್ಥೆಯ ವಿರುದ್ಧ ಹಾಗೂ ಇನ್ನಿತರರ ವಿರುದ್ಧ ದಿನಾಂಕ:11-07-2025 ರಂದು ಸಿಬಿಐ ಪ್ರಕರಣ ದಾಖಲಿಸಿರುವುದು ಕಂಡುಬಂದಿರುತ್ತದೆ. ಆದರೆ ಸದರಿ ಪ್ರಕರಣವು ಅಂತಿಮಗೊಂಡು ಆದೇಶವಾಗಿರುವುದು ಕಂಡುಬಂದಿರುವುದಿಲ್ಲ ಹಾಗೂ ಸದರಿ ಪ್ರಕರಣದ ಹಿನ್ನಲೆಯಲ್ಲಿ ಮೇಲ್ಕಂಡ ಸಂಸ್ಥೆಯನ್ನು ಟೆಂಡರ್‌ಗಳಲ್ಲಿ ಭಾಗವಹಿಸಲು ನಿರ್ಬಂಧಿಸಿರುವುದಿಲ್ಲ. ಆದ ಕಾರಣ ಟೆಂಡರ್ ಪ್ರಕ್ರಿಯೆಯನ್ನು ನಿಯಮಾನುಸಾರ ಮುಂದುವರೆಸಲಾಗಿರುತ್ತದೆ. |
| ಇ) | ಆದಾಗ್ಯೂ ಪಶ್ಚಿಮ ಬಂಗಾಳ ಮೂಲದ BVEPL ಸಂಸ್ಥೆಗೆ ಟೆಂಡರ್ ನೀಡಿರುವ ಬಗ್ಗೆ ಸರ್ಕಾರದ ನಿಲುವೇನು? (ವಿವರ ನೀಡುವುದು) | |

ಸಂಖ್ಯೆ: ಲೋಇ 70 ಇಎಪಿ 2026

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು